ಮಾಡಿ, ಈ ಪ್ರಕರಣವನ್ನು ವಿಚಾರಣೆ ಮಾಡಲು ನೀವು ಸಿ.ಓ.ಡಿ.ಗಾದರೂ ರೆಫರ್ ಮಾಡಿ, ಅಥವಾ ಈಗಾಗಲೇ ಮಾತನಾಡಿದ ರಾಮಕೃಷ್ಣರವರು ಹೇಳಿದಂತೆ ಜ್ಯುಡಿಶಿಯಲ್ ಎನ್‌ಕ್ವೈರಿಯಾದರೂ ಯಾವ ಮಟ್ಟದಲ್ಲಿ ಮಾಡುತ್ತೀರೋ ಮಾಡಿ. ಆದರೆ ನನ್ನ ಅಭಿಪ್ರಾಯವೇನೆಂದರೆ ಈ ಪ್ರಕರಣದಲ್ಲಿ ರಾಜಕೀಯಕ್ಕಿಂತಲೂ ಅಲ್ಲಿ ವೆಸ್ಟೆಡ್ ಇಂಟರೆಸ್ಟ್ ಕ್ಲಾಸ್‌ನವರು ಈ ಕೆಲಸವನ್ನು ಮಾಡುತ್ತಿದ್ದಾರೆ. ಆ ವೆಸ್ಟೆಡ್ ಇಂಟರೆಸ್ಟ್ ಕ್ಲಾಸ್‌ನವರು ಯಾರು? ಇದರಲ್ಲಿ ನಿಮ್ಮ ಪಾರ್ಟಿಯವರು ಇರಬಹುದು, ನಮ್ಮ ಪಾರ್ಟಿಯವರು ಇರಬಹುದು ಅಥವಾ ಅವರ ಪಾರ್ಟಿಯವರು ಇರಬಹುದು. ಇದನ್ನು ಕಂಡುಹಿಡಿಯಬೇಕಾದರೆ ಹೈಯರ್ ಆಫೀಸರ್ಸ್ ಐ.ಜಿ.ಪಿ. ಲೆವಲ್‌ನಲ್ಲಿ ಹೋಮ್ ಸೆಕ್ರೆಟರಿ ಇವರು ಯಾರಾದರೂ ಕೈ ಹಾಕಿ. ಏಕೆಂದರೆ ಬಹಳ ದೂರವಿಲ್ಲ ನೋಡಿ, ಮೇಖ್ರಿ ಸರ್ಕ್‌ಲ್‌ನಿಂದ ಕೇವಲ 14 ಕಿ.ಮೀ. ದೂರವಾಗುತ್ತದಷ್ಟೆ. ಅಂಥ ಕಡೆ ಮೂರು-ಮೂರು, ನಾಲ್ಕು-ನಾಲ್ಕು ಆದರೂ ರಾಜನಕುಂಟೆಯಂಥ ಊರು ಮುಖ್ಯರಸ್ತೆಯಲ್ಲಿದೆ, ಅದು ನ್ಯಾಶನಲ್ ಹೈವೆ, ಅಥವಾ ನಮ್ಮ ದೊಡ್ಡಬಳ್ಳಾಪುರಕ್ಕೆ ಹೋಗತಕ್ಕಂಥ ಕಡೆಯಿಂದ ಈ ಊರು ಕೇವಲ 6.ಕಿ.ಮಿ.ಗಳಾಗುತ್ತದೆ. ಇದರ ಬಗ್ಗೆ ಮಾಹಿತಿಗಳು ಇದ್ದರೂ ಕೂಡ 8 ಗಂಟೆಗಳು ಕಳೆದರೂ ಪೋಲಿಸ್‌ನವರು ಅಲ್ಲಿಗೆ ಹೋಗಿಲ್ಲ. ಅಂದರೆ ಕೊಲ್ಯುಶನ್ ದಿಂದಲೇ ಮಾಡಿದ್ದಾರೆ ಎನ್ನತಕ್ಕಂಥದ್ದು ಬಹಿರಂಗಪಡುತ್ತಿದೆ. ಅದಕ್ಕಾಗಿ ದಯವಿಟ್ಟು ಅದರ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು ಮತ್ತು ಈ ಬಗ್ಗೆ ಅನೇಕರು ಅನೇಕ ವಿಷಯಗಳನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ ಅದನ್ನು ಪುನಃ ನಾನೇನು ಹೇಳಬೇಕಾಗಿಲ್ಲ. ಸಂಬಂಧಪಟ್ಟವರಿಗೆ ಪರಿಹಾರವನ್ನು ಕೊಡುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕು.

(ಆ) ಬಸವಾರಜ್ ಶಿವಪ್ಪ ಗುಡ್ಡಟ್ಟಿ ಎಂಬೊತನ ಮೇಲೆ 16 ಜನರ ಗುಂಪಿನಿಂದ ದುಷ್ಕೃತ್ಯ.

+ ಶ್ರೀ ಮಂಜುನಾಥ್ ಸಿ.ಕುನ್ನೂರ್:- ಮಾನ್ಯ ಉಪಾಧ್ಯಕ್ಷರೆ,

ಉಪಾಧ್ಯಕ್ಷರು:- ಈಗ 30 ನಿಮಿಷ ನಿಗದಿಪಡಿಸಿರುವುದರಿಂದ ಇನ್ನೂ 5 ಜನರು ಮಾತನಾಡುವವರು ಇದ್ದಾರೆ.

ಶ್ರೀ ಮಂಜುನಾಥ್ ಸಿ.ಕುನ್ನೂರ್:- ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಮಾತನಾಡಲು ಈಗಾಗಲೇ 15ನೇ ತಾರೀಖೇ ನೋಟೀಸ್ ಕೊಟ್ಟಿದ್ದೇನೆ.

1.40 ಪಿ.ಎಂ

ಉಪಾಧ್ಯಕ್ಷರು:- ಈಗಾಗಲೇ ಮಾನ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ.

ಶ್ರೀ ಮಂಜುನಾಥ್ ಸಿ.ಕುನ್ನೂರು:- ಮಾನ್ಯ ಉಪಾಧ್ಯಕ್ಷರೆ, ದಿನಾಂಕ 25-6-96ನೇ ದಿವಸ ರಾತ್ರಿ ಸುಮಾರು 11 ಗಂಟೆಗೆ ಬಸವರಾಜ್ ಶಿವಪ್ಪ ಗುದ್ದಟ್ಟಿ ಎಂಬತಕ್ಕ 39ವರ್ಷದ ಯುವಕ ಹೊರಗೆ ಹೊರಟ ಸಂದರ್ಭದಲ್ಲಿ ಸುಮಾರು 16ಜನರ ಗುಂಪು

ಅವನ ಮೇಲೆ ದುಷ್ಕೃತ್ಯವನ್ನು ಎಸಗಿ, ಅವನ ಮೈಮೇಲಿದ್ದ ಶಾಲಿನಿಂದ ಅವನ ಕುತ್ತಿಗೆಗೆ ಸುತ್ತಿ ಅನಂತರ ಅವನನ್ನು ಅವನ ಮನೆಯಲ್ಲಿ ದನಕಟ್ಟುವ ಕೊಟ್ಟಿಗೆಗೆ ಒಯ್ದು, ಅವನ ಕೈಕಾಲುಗಳನ್ನು ಕಟ್ಟಿ ಅವರದೇ ಬಣವೆಯಲ್ಲಿ ಬೆಂಕಿಹಚ್ಚಿ ಆ ಯುವಕನನ್ನು ಸಜೀವದಹನ ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಈಗಾಗಲೇ ಮಾನ್ಯ ರಾಮಕೃಷ್ಣರವರು ಈ ಬಗ್ಗೆ ಪ್ರಸ್ತಾವನೆಯನ್ನು ಮಾಡಿದ್ದಾರೆ. ಆವೊತ್ತು ಮಾಡಿದಂತಹ ಕೃತ್ಯವನ್ನು ನೋಡಿದರೆ, ಈತನೂ ಕೂಡ ಕೆ.ಎಂ.ಸಿ.ಆಸ್ಪತ್ರೆಯಲ್ಲಿದ್ದಾನೆ. ಅವನು ಉಳಿಯುತ್ತಾನೋ ಇಲ್ಲೋ ಎನ್ನತಕ್ಕ ಒಂದು ಭಯದ ವಾತಾವರಣ ಇದೆ. ಇವತ್ತು ತುಂಬಲಾರದ ಅನ್ಯಾಯ ಸವಣೂರಿನಲ್ಲಿ ಆಗಿದೆ. ಇಂತಹ ಘಟನೆಗಳು ಆದಾಗ ಸವಣೂರು ಸೆನ್ಸಿಟೀವ್ ಪ್ಲೇಸ್, ಅದೊಂದು ಸೂಕ್ಷ್ಮವಾದ ಪ್ರದೇಶವೆಂದು ಪೋಲೀಸ್ ಇಲಾಖೆಗೆ ಹೇಳಿದರೂ ಕೂಡ ಪೋಲಿಸರು ಈ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

ಉಪಾಧ್ಯಕ್ಷರು:- ಇದಕ್ಕೆ ಸಂಬಂಧಪಟ್ಟಂತಹ ವಿಷಯವಲ್ಲ ತಾವು ಬೇಗ ಮುಗಿಸಿ.

ಶ್ರೀ ಮಂಜುನಾಥ ಸಿ.ಕುನ್ನೂರು:- ಸಾರ್, ನಿನ್ನೆ ಅಲ್ಲ ಮೊನ್ನೆ ತಮಗೆ ಒಂದು ಪ್ರಸ್ತಾವನೆಯನ್ನು ಕಳುಹಿಸಿ ಕೊಟ್ಟಿದ್ದೇನೆ. ಆ ಘಟನೆಗೆ ಸಂಬಂಧಿಸಿದ ಎಫ್ಐಆರ್ ಕಾಪಿ ನನ್ನ ಹತ್ತಿರ ಇದೆ. ಆ ಘಟನೆಗೆ ಸಂಬಂಧಪಟ್ಟ ಆಸ್ತಿಯ ವಿವಿರ ಕೂಡ ನನ್ನ ಹತ್ತಿರ ಇದೆ. ಈ ವಿಚಾರದಲ್ಲಿ ತಾವು ಸರಿಯಾದ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು. ಆ ಪೋಲಿಸ್ ಸ್ಟೇಷನ್ನಿನಲ್ಲಿ ಇಬ್ಬರು ಪಿ.ಐ.ಎಸ್ಗಳು ಇಲ್ಲ. ಪಿ.ಐ.ಎಸ್ ಹುದ್ದೆಗಳು ಖಾಲಿ ಇವೆ. ಆ ಪೋಲೀಸ್ ಇಲಾಖೆಯವರು ಯಾವರೀತಿ ಕಾರ್ಯವನ್ನು ಮಾಡುತ್ತಿದ್ದಾರೆಂದು ತಿಳಿಯತಕ್ಕದ್ದು ಇದೆ. ಈ ವ್ಯಾಜ್ಯ ಬಹಳಷ್ಟು ದಿವಸಗಳಿಂದ ಇದ್ದರೂ ಕೂಡ, ಫಿರ್ಯಾದಿ ಇದ್ದಂತವನು ಪೋಲೀಸ್ಸ್ಟೇಶನ್ಗೆ ಹೋಗಿ ಫಿರ್ಯಾದಿ ಕೊಟ್ಟರೂ ಕೂಡ ಯಾವುದೇ ಕ್ರಮವನ್ನು ಇಲ್ಲಿಯತನಕ ತೆಗೆದುಕೊಂಡಿಲ್ಲ. ಸಜೀವ ದಹನ ಮಾಡುವಂತಹ ಕೆಲಸ ಇವತ್ತು ಈ ರಾಜ್ಯದಲ್ಲಿ ನಡೆಯುತ್ತಿದೆ ಅಂದರೆ ಈ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಮಾಡುವುದಾಗಲೀ ರಕ್ಷಣೆ ಕೊಡುವುದರಲ್ಲಿ ಈ ಸರ್ಕಾರ ವಿಫಲವಾಗಿದೆ ಎನ್ನತಕ್ಕ ಮಾತನ್ನು ಖಂಡಿತವಾಗಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ತಮಗೆ ಕಳುಹಿಸಿ ಕೊಡುತ್ತೇನೆ ಯೋಗ್ಯವಾದ ಕ್ರಮವನ್ನು ತಾವು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಚಂದ್ರಕಾಂತ ಬೆಲ್ಲದ್:- ಇದು ಸವಣೂರಿನಲ್ಲಿ ಆಗಿರತಕ್ಕ ಘಟನೆ, ಆ ವ್ಯಕ್ತಿಯನ್ನು ಸಜೀವವಾಗಿ ಕಟ್ಟಿಹಾಕಿ ಆತನ ಬಣವೆಗೆ ಬೆಂಕಿ ಹಚ್ಚಿದ್ದಾರೆ.

ಉಪಾಧ್ಯಕ್ಷರು:- ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ ತಾವು ಕುಳಿತುಕೊಳ್ಳಿ.

ಶ್ರೀ ಚಂದ್ರಕಾಂತ ಬೆಲ್ಲದ್:- ಹಲ್ಲೆಗೆ ಒಳಗಾದ ವ್ಯಕ್ತಿ ಇವತ್ತಿನವರೆಗೂ ಉಪಚಾರ

ಪಡೆಯುತ್ತಿದ್ದಾರೆ. ಅವರು ಗುಣಮುಖರಾಗಿ ಬರುವುದೇ ಬಹಳ ಕಷ್ಟವಿದೆ. ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು.

ಉಪಾಧ್ಯಕ್ಷರು:- ಆಯಿತು ತಾವು ಕುಳಿತುಕೊಳ್ಳಿ. ಮಂತ್ರಿಗಳು ಉತ್ತರ ಕೊಡಲಿ.

ಶ್ರೀಮತಿ ಪ್ರಮೀಳ ನೇಸರ್ಗಿ:- ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಮೊದಲು ಎರಡೇ ಎರಡು ಮಾತು. ನಾನು ಜಾಸ್ತಿ ಹೇಳುವುದಿಲ್ಲ ಎರಡು ಮಾತಿನಲ್ಲಿ ಮುಗಿಸುತ್ತೇನೆ. ಜ್ಯುಡಿಶಿಯಲ್ ಎನ್‌ಕ್ವಾಯರಿ ಆಗಬೇಕೆಂದು ನಮ್ಮ ನಾಯಕರು ಕೇಳಿದ್ದಾರೆ. ನಾನು ಹೇಳುವುದು ಇಷ್ಟೆ, ಇವತ್ತು ಅವರು ತಪ್ಪಿಸಿಕೊಂಡು ಹೋಗಿ ನವದೆಹಲಿಯಲ್ಲಿ ಇರಲಿಕ್ಕೆ ಯಾರು ಅವನಿಗೆ ಆಶ್ರಯ ನೀಡಿದ್ದಾರೆ Harbouring of the accused is also an offender. ತಪ್ಪಿಸಿಕೊಂಡವರಿಗೆ ಯಾರು ರಕ್ಷಣೆ ಕೊಟ್ಟಿದ್ದಾರೆ, ಅವರನ್ನು ಕೂಡ ರೆಫರೆನ್ಸ್‌ನಲ್ಲಿ ಇನ್‌ಕ್ಲೂಡ್ ಮಾಡಬೇಕೆಂದು ಸಲಹೆಯನ್ನು ಕೊಡುತ್ತಿದ್ದೇನೆ.

ಉಪಾಧ್ಯಕ್ಷರು:- ಆಯಿತು. ಮಾನ್ಯ ಮಂತ್ರಿಗಳು ಹೇಳಿಕೆ ಕೊಡಿರಿ.

+ಶ್ರೀ ಆರ್.ರೋಷನ್ ಬೇಗ್ (ರಾಜ್ಯ ಗೃಹ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವೈ.ರಾಮಕೃಷ್ಣರವರು ಯಾವುದೊಂದು ಪ್ರಶ್ನೆಯನ್ನು ಎತ್ತಿದ್ದಾರೆ, ಅರಕೆರೆ ವಿಲೇಜ್ ರಾಜನಕುಂಟೆ, ದೊಡ್ಡಬಳ್ಳಾಪುರ ರೂರಲ್ ಪೋಲೀಸ್‌ಸ್ಟೇಶನ್ ಲಿಮಿಟ್‌ನಲ್ಲಿ ಇದು ಆಗಿರತಕ್ಕ ಘಟನೆ. ಘಟನೆಯಾದದ್ದು ನಿಜ, ಆವೊತ್ತು ಬೆಳಿಗ್ಗೆ ಆರೂವರೆ ಗಂಟೆಗೆ ಗುಂಪು ಘರ್ಷಣೆಯಾಯಿತು. ಗುಂಪು ಘರ್ಷಣೆಯಾಗಿದ್ದು ಸ್ವಂತ ಸಂಬಂಧಿಕರಲ್ಲಿ. ಆ ಊರಿನಲ್ಲಿರುವ ಒಕ್ಕಲಿಗರು, ಆ ಒಕ್ಕಲಿಗರಲ್ಲಿ ಎರಡು ಗುಂಪು ಅವರೆಲ್ಲ ಸಂಬಂಧಿಕರು. ಅದಕ್ಕೆ ಕಾರಣ ಏನೆಂದರೆ 3 ಎಕರೆ 9 ಗುಂಟೆ ಒಂದು ಜಮೀನು ಇದೆ. ಆ ಜಮೀನಿನ ಬಗ್ಗೆ ಜಗಳ. ಅಲ್ಲೊಂದು ಮುತ್ಯಾಲಮ್ಮ ದೇವಸ್ಥಾನವಿದೆ. ಆ ದೇವಸ್ಥಾನಕ್ಕೆ ಇನಾಂತಿ ಲ್ಯಾಂಡ್ ಇದೆ. ಆ ಲ್ಯಾಂಡ್‌ಗೆ ಪೈಪೋಟಿ ನಮಗೂ ನಿಮಗೂ ಅಂತ, ಜಗಳ ಶುರುವಾಗುತ್ತದೆ. ಇದಕ್ಕೆ ಮುಂಚೆ ಮೇ 8ನೇ ತಾರೀಖು ಇದೇ ತರಹ ಬೆಳಿಗ್ಗೆ ಒಂದು ಗಲಾಟೆಯಾಗಿ ಅವರೊಂದು ಕಡೆ ಕಂಪ್ಲೈಂಟ್ ಮಾಡಿದರೂ ಇವರೊಂದು ಕಡೆ ಕಂಪ್ಲೆಂಟ್ ಮಾಡಿದರು. A Case and counter case has been filed in Cr.No.180/96. Rajanna and three others were arrested. They were taken to JMFC, Doddaballapur and they were remanded to judicial custody. ಇದು ಮೊದಲೇ ಒಂದು ಗಲಾಟೆಯಾಗಿತ್ತು. ಅದಕ್ಕೆ ನಾವು ಅಲ್ಲೊಂದು ಕಾವಲು ಕೂಡ ಹಾಕಿದ್ದೆವು. ಒಬ್ಬರು ಎಎಸ್‌ಐ, ಒಬ್ಬರು ಹೆಡ್ ಕಾನ್‌ಸ್ಟೇಬಲ್, ಇಬ್ಬರು ಕಾನ್‌ಸ್ಟೇಬಲ್ ಹಾಕಿದ್ದೆವು. ಇದು ಏನಾಗಿದೆ ಎಂದರೆ ಆವೊತ್ತು ಬೆಳಿಗ್ಗೆ ಸ್ಪಾಟ್‌ನಿಂದ ಔಟ್‌ಪೋಸ್ಟ್‌ಗೆ ಯಾವಾಗ ವಾಪಸ್ಸು ಬಂದರೋ, ಇವರು ವಾಚ್ ಮಾಡಿಕೊಂಡು ಬೆಳಿಗ್ಗೆ ಇಷ್ಟೊತ್ತಿಗೆ ಪೋಲೀಸ್ ಅಲ್ಲಿರುವುದಿಲ್ಲ, ಬರೀ ಒಬ್ಬ ಕಾನ್‌ಸ್ಟೇಬಲ್ ಇರುತ್ತಾನೆ ಎಎಸ್‌ಐ, ಹೆಡ್‌ಕಾನ್‌ಸ್ಟೇಬಲ್

ಎಲ್ಲ ಔಟ್‌ಪೋಸ್ಟ್‌ಗೆ ಬರುತ್ತಾರೆಂದು ನೋಡಿಕೊಂಡು ಅಲ್ಲಿಗೆ ಹೋಗಿ ಗಲಾಟೆ ಮಾಡಿದ್ದಾರೆ. ಈ ಎರಡು ಗುಂಪುಗಳು ಸಂಬಂಧಿಕರು. ಈ ಸಂಬಂಧದಲ್ಲಿ 31 ಜನ ಅರೆಸ್ಟ್ ಆಗಿದ್ದಾರೆ. Sir, 31 persons have been arrested including the main accused Sri Channegowda, ಅಲ್ಲಿ ಮೇನ್ ಅಕ್ಯುಸ್ಡ್ ಚನ್ನೇಗೌಡ, ಆಮೇಲೆ ನರಸಿಂಹಯ್ಯ ಅಂತ ಯಾರಿದ್ದಾರೆ ಎಕ್ಸ್ ಛೇರ್ಮನ್ ವಿಲೇಜ್ ಪಂಚಾಯಿತ್ ಈಗ ಪ್ರೆಸೆಂಟ್ ಛೇರ್ಮನ್. Who are supposed to be the main accused have been arrested. ಅವರು ಅರೆಸ್ಟ್ ಆಗಿದ್ದಾರೆ. ಒಟ್ಟಿನಲ್ಲಿ 31 ಜನ ಅರೆಸ್ಟ್ ಆಗಿ ಈಗ ಜ್ಯುಡಿಸಿಯಲ್ ಕಸ್ಟಡಿಯಲ್ಲಿದ್ದಾರೆ. ಜೊತೆಗೆ ಇನ್ನು ಕೆಲವರು ಆನಂದ್ ಬಿನ್ ಚನ್ನೇಗೌಡ ಲಕ್ಷ್ಮೀನಾರಾಯಣ ಬಿನ್ ಚನ್ನೇಗೌಡ, ನಾಗರಾಜ್ ಬಿನ್ ನರಸಿಂಹಯ್ಯ, ಮೂರ್ತಿ ಬಿನ್ ನರಸಿಂಹಯ್ಯ ಇವರಿಗೆಲ್ಲ ನಾವು ಸರ್ಚ್ ಮಾಡುತ್ತಿದ್ದೇವೆ. ಒಂದೆರಡು ದಿವಸಗಳಲ್ಲಿ ಅವರಿಗೂ ಹಿಡಿದು ಹಾಕುತ್ತೇವೆ. ಪೋಲೀಸ್‌ನವರು ಇಮ್ಮಿಡಿಯೇಟಾಗಿ ಅವರಿಗೆಲ್ಲ ಅರೆಸ್ಟ್ ಮಾಡಿದ್ದಾರೆ. ಚೆನ್ನೇಗೌಡ ಮತ್ತು ಇತರ 80 ಜನ ಅವರೆಲ್ಲ ಹೋಗಿ ವೆಂಕಟರಮಣಪ್ಪಗೆ ಅಟ್ಯಾಕ್ ಮಾಡಿದ್ದಾರಲ್ಲ, ವೆಂಕಟರಮಣಪ್ಪ ಚಿಕ್ಕಣ್ಣಪ್ಪ, ಚಲಪತಿ, ರಾಮಕೃಷ್ಣಪ್ಪ ಇವರೆಲ್ಲ ಇನ್ನು ಆಸ್ಪತ್ರೆಯಲ್ಲಿದ್ದಾರೆ. He is out of danger. ಅಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಇತರ ಪೋಲೀಸ್ ಆಫೀಸರ್ಸ್ ಎಲ್ಲ ಹೋಗಿ ಆವೊತ್ತು ಬೆಳಿಗ್ಗೆ 10-30ಗಂಟೆಗೆ ಒಂದು ಎಫ್‌ಐಆರ್ ರಿಜಿಸ್ಟರ್ ಆಗಿದೆ. One suo moto case in CR No.27/96 under sections 143, 147, 148, 324, 448, 427, 307, 395, 302, 149 of IPC and 25 and 27 of Indian Arms Act. ಮೇಲೆ ಇವತ್ತು ಕೇಸು ರಿಜಿಸ್ಟರ್ ಆಗಿದೆ. ಇದು ಮಾನ್ಯ ವೈ.ರಾಮಕೃಷ್ಣರವರು ಏನು ಹೇಳಿದರು ಬೇರೆ ಹೊಸಕೋಟೆ ತಾಲ್ಲೂಕಾಗಲಿ, ಆನೇಕಲ್ ತಾಲ್ಲೂಕಾಗಲಿ ಅವೆಲ್ಲ ಬೇರೆ ಕಡೆಯದು ಹೇಳಿದ್ದಾರೆ. ಅದರ ಬಗ್ಗೆ ಬೇರೆ ರೀತಿಯಲ್ಲಿ ಹೇಳಲಿ ನಾನು ಉತ್ತರ ಕೊಡುತ್ತೇನೆ. ಆ ರೀತಿ ಘಟನೆಗಳು ಆ ಕಡೆಗೆ ಆಗಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆಗಿರಬಹುದು, ತಾವು ಅರಕೆರೆಯ ಬಗ್ಗೆ ಜೀರೋ ಅವರ್‌ನಲ್ಲಿ ಎತ್ತಿದ್ದೀರಿ. ತಾವು ಹೇಳುವಾಗ ಬಿಜೆಪಿ ಮುಖಂಡರು ಎಂದು ಹೇಳಿದಿರಿ. ಮಾನ್ಯ ಸಭಾಧ್ಯಕ್ಷರೆ ನಾನೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ಬಿಜೆಪಿಯವರ ಕಡೆಯವರು ಯಾರೆಂದರೆ ಚಲಪತಿ ಮತ್ತು ಚಿಕ್ಕಣ್ಣಪ್ಪರವರು ಇದ್ದಾರಲ್ಲ ಅವರ ಮಾವ ತಿಮ್ಮೇಗೌಡ ಅಂತ ಹೇಳಿ, ಪಿ.ಎಂ.ತಿಮ್ಮೇಗೌಡ ಇವರೊಬ್ಬರು ಪ್ರೈಮರಿ ಸ್ಕೂಲ್ ಟೀಚರ್. ಇವರೊಬ್ಬರು ಬಿಜೆಪಿ ವರ್ಕರ್. ಇವರು ಬಿಜೆಪಿ ಮುಖಂಡರು ಅಂತ ಹೇಳಿದ್ದಾರೆ. ನಮ್ಮ ಪೋಲೀಸ್ ವರದಿಯ ಪ್ರಕಾರ ಅವರು ಬಿಜೆಪಿ ಲೀಡರ್ಸ್ ಅಲ್ಲ. Only this T.L.Thimmegowda is a school teacher. he is BJP worker. ಇವರ ರಿಲೇಟಿವ್. ಇಬ್ಬರ ಕಡೆ ನಾನು ಹೇಳಿದಹಾಗೆ ಈ ಕಡೆಯವರು ಆ ಕಡೆಯವರು ಇಬ್ಬರೂ ರಿಲೇಟಿವ್ಸ್. ಈ ಜಮೀನಿನ ಬಗ್ಗೆ

ಗಲಾಟೆಯಾಗಿದೆ. Police have taken prompt action. ಇದಕ್ಕೆ ಮುಂಚೆ ಕೇಸಸ್ ಕೌಂಟರ್ ಕೇಸಸ್ ಇದೆ. ಇವರಿಗೆ ತಹಶೀಲ್ದಾರರು ಇಂಟರಿಮ್ ಭಾಂಡ್ ಕೂಡ ಮಾಡಿದ್ದರು ಇವರಿಗೆ ಗಲಾಟೆಯಾಗಬಾರದೆಂದು ಅಂಡರ್ ಸೆಕ್ಷನ್ 107 ಆಗಲೇ ಒಂದು ಪ್ರಯತ್ನ ಮಾಡಿದ್ದರು. ನಾವು ಪ್ರಾಮ್ಪ್ ಆಗಿ ಆಕ್ಷನ್ ತೆಗೆದುಕೊಂಡಿದ್ದೇವೆ. ಅಲ್ಲಿ ಅರೆಸ್ಟ್ ಸಹ ಮಾಡಿದ್ದೇವೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಏನು ಹೇಳಿದರು ಅಂದರೆ, ಅಲ್ಲಿ ಒಬ್ಬ ಎಎಸ್ಐ ಮಿಸ್‌ಚೀಪ್ ಮಾಡಿದ ಅಂತ. Immediately I will see that departmental enquiry is initiated and action will be taken against him. ಈ ತರಹ ಅವರಿಗೆ ನಾನು ಆಶ್ವಾಸನೆಯನ್ನು ಕೊಡುತ್ತೇನೆ. ಮಾನ್ಯ ವೈ.ರಾಮಕೃಷ್ಣರವರು ಬೇರೆ ಕಡೆ ಎಲ್ಲಾ ಈ ತರಹ ಗಲಾಟೆಯಾಗುತ್ತಿದೆಂದರು. ಪೋಲೀಸ್ ಇಲಾಖೆಯ ಡಿಮಾಂಡ್ಸ್ ಇವತ್ತೆ ಇದೆ, ಅದರ ಬಗ್ಗೆ ಮಾನ್ಯಸದಸ್ಯರು ಮಾತನಾಡಲಿ. ಅದರ ಬಗ್ಗೆ ಸರ್ಕಾರದ ಪರವಾಗಿ ಉತ್ತರ ಕೊಡಲಿಕ್ಕೆ ನಾನು ತಯಾರಾಗಿದ್ದೇನೆ. ಆಮೇಲೆ ಅವರಿಗೆ ಏನಾದರೂ ಪರಿಹಾರ ಕೊಡಿಯೆಂದು ಹೇಳಿದ್ದಾರೆ. ಕಾನೂನು ಪ್ರಕಾರ ಮರ್ಡರ್ ಕೇಸಸ್‌ನಲ್ಲಿ ಪರಿಹಾರ ಕೊಡುವುದಕ್ಕಾಗುವುದಿಲ್ಲ. ಆದರೆ ಅವರ ಫೈನಾನ್ಸಿಯಲ್ ಸ್ಟೇಟಸ್ ನೋಡಿ ಅವರ ಹೆಣ್ಣುಮಕ್ಕಳು ಅದೆಲ್ಲ ಹೇಳಿದ್ದಾರೆ ಅವರಿಗೆ ಆಶ್ರಯ ಸ್ಕೀಮ್‌ನಲ್ಲಿ ಮನೆಗಳನ್ನು ಕೊಡಲಿಕ್ಕೆ ಸಾಧ್ಯವೇ ಎಂಬುದನ್ನು ನೋಡುತ್ತೇನೆ. ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಸ್ವಾಮಿ, ನಮ್ಮ ಬೇಡಿಕೆ, ಇದರಲ್ಲಿ ಯಾವುದೇ ಕೈವಾಡ ಇಲ್ಲ ಎಂದು ಸ್ಪಷ್ಟವಾದ ಮೇಲೆ ನ್ಯಾಯಾಂಗ ತನಿಖೆ ಮಾಡುವುದಕ್ಕೆ ತೊಂದರೆ ಏನು? ಸ್ವಾಮಿ, ಹಿಂದೆ ಘಟನೆ ನಡೆದಿತ್ತು, ಕಂಪ್ಲೇಂಟ್ ಕೊಟ್ಟಿತ್ತು, ಕೇಸುಗಳು ಹಾಕಿದ್ದರು, ರಕ್ಷಣೆ ಕೊಡಲಿಲ್ಲ. ಜಮೀನು ನೆಪ ಮಾತ್ರ ಪ್ರಭಾವಿ ವ್ಯಕ್ತಿಗಳನ್ನು ರಕ್ಷಣೆ ಮಾಡತಕ್ಕಂಥದ್ದು ಸರ್ಕಾರದ ಉದ್ದೇಶ ಇದೆ. ಒಬ್ಬ ಮುಖ್ಯ ಅಪರಾಧಿ ಡೆಲ್ಲಿಗೆ ಹೋಗಿ, ಪ್ರಮುಖರ ಮನೆಯಲ್ಲಿ ಕೂತಿದ್ದಾನೆ. ಅವನನ್ನು ಅರೆಸ್ಟ್ ಮಾಡತಕ್ಕ ಪ್ರಯತ್ನ ಮಾಡಿಲ್ಲ, ಪೋಲಿಸ್ ಅಧಿಕಾರಿಗಳನ್ನು ವಿಚಾರಣೆ ಮಾಡುವ ಮುನ್ನ, ಅವರನ್ನು ಸಸ್ಪೆಂಡ್ ಮಾಡಿ...

ಉಪಾಧ್ಯಕ್ಷರು:- ಶೂನ್ಯವೇಳೆಯಲ್ಲಿ ಚರ್ಚೆ ಮಾಡತಕ್ಕದ್ದಲ್ಲ. ಈಗಾಗಲೇ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ.

ಶ್ರೀ ವೈ.ರಾಮಕೃಷ್ಣ:- ಪೋಲೀಸ್‌ನವರು ಅವರ ಕಡೆ ಏಕೆ ಗಮನ ಕೊಡಲಿಲ್ಲ. ಅವರ ಬಂದೂಕ್‌ಗಳನ್ನು ಏತಕ್ಕೆ ಸೀಸ್ ಮಾಡಲಿಲ್ಲ. ಸೆಂಟ್ರಲ್ ಜೈಲಿನಿಂದ ಬಂದು ಇವರನ್ನು ಕೊಲೆ ಮಾಡಿದ್ದಾರೆ. ಪೊಲೀಸನವರು ಅಲ್ಲಿದ್ದುಕೊಂಡು ಕೂಡ, ರಕ್ಷಣೆ ಕೇಳಿದರೂ ಕೂಡ ಎ.ಎಸ್ಐಯವರು ಸಾಯಲಿ ಹೋಗು ಎಂದು ಹೇಳಿರಬೇಕಾದರೆ, ಇದನ್ನು ನಾನು ಬರೆದುಕೊಂಡು ಬಂದಿದ್ದೇನೆ. ಆ ಎ.ಎಸ್.ಐ. ಸತ್ತರೆ ಸಾಯಲಿ

ಹೋಗು ಎಂದು ಹೇಳಿರಬೇಕಾದರೆ, ನಾನು ಹೇಳುವುದು ಸುಳ್ಳು ಇದ್ದರೆ ಕೇಳಿ, ಜೈಲಿಗೆ ಹೋಗಿದ್ದೆರೋ ಇಲ್ಲವೋ ಕೇಳಿ, ಬಂದ ತಕ್ಷಣ ಈ ಘಟನೆ ನಡೆದಿದೆ. ಇದು ನ್ಯಾಯಾಂಗ ತನಿಖೆಯಾಗಬೇಕು ಅದಕ್ಕೆ ದಯವಿಟ್ಟು ಒಪ್ಪಿಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಆ ಎ.ಎಸ್.ಐ.ಯನ್ನು ಸಸ್ಪೆಂಡ್ ಮಾಡಿದ್ದಿರೊ, ಮಾಡುತ್ತೀರೊ?

ಶ್ರೀ ಆರ್.ರೋಷನ್ ಬೇಗ್:- ಅವರನ್ನು ಸಸ್ಪೆಂಡ್ ಮಾಡುತ್ತೇನೆ.

(ಇ) ಹೇಮಾವತಿ ಜಲಾಶಯ ಯೋಜನೆಯಿಂದ, ಸಕಾಲದಲ್ಲಿ ನೀರು ಬಿಡದೆ ರೈತರ ಬೆಳೆಗಳಿಗೆ ತೊಂದರೆ.

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು):- ಸನ್ಮಾನ್ಯ ಉಪಾಧ್ಯಕ್ಷರೆ, ಹೇಮಾವತಿ ಜಲಾಶಯ ಯೋಜನೆಯಿಂದ ಆ ಯೋಜನೆಯ ಕಾಲುವೆಗಳಿಗೆ ಸಕಾಲದಲ್ಲಿ ನೀರನ್ನು ಬಿಡದೆ ರೈತರ ಬೆಳೆಗಳಿಗೆ ಅಥವಾ ರೈತರು ಬೆಳೆಗಳನ್ನು ಬೆಳೆಯಲಿಕ್ಕೆ ತುಂಬಾ ತೊಂದರೆಯಾಗುತ್ತಿರುವ ಬಗ್ಗೆ ಚರ್ಚೆಯನ್ನು ಮಾಡಲಿಕ್ಕೆ ನಾನು ಅನುಮತಿಯನ್ನು ಕೇಳಿದ್ದೆ, ತಾವು ಅವಕಾಶವನ್ನು ಕೊಟ್ಟಿದ್ದೀರಿ ಅದಕ್ಕಾಗಿ ತಮ್ಮನ್ನು ನಾನು ಅಭಿನಂದಿಸುತ್ತಾ, ಈಗ ನೀರಾವರಿ ಸಲಹಾ ಸಮಿತಿಯು ಸಭೆ ಸೇರಿ, ಈ ತಿಂಗಳು 10ನೇ ತಾರೀಖು ಹೇಮಾವತಿ ಜಲಾಶಯ ಯೋಜನೆಯ ಕಾಲುವೆಯೊಳಗೆ ನೀರು ಬಿಡಬೇಕು ಎಂದು ಹೇಳಿ ನಿರ್ಣಯ ಮಾಡಿತ್ತು. ಆ ಸಂದರ್ಭದಲ್ಲಿ ಬಹಳ ಲೇಟಾಯಿತು ಎಂದು ಕಲಾಪ ಚರ್ಚೆ ಮಾಡಿದೆವು. ಏಕೆಂದರೆ ನೀರನ್ನು ಬಿಡುವುದು ಲೇಟಾಯಿತು ಅಂದರೆ, ಬೆಳೆಯನ್ನು ಇಡುವುದೂ ಕೂಡ ಲೇಟಾಗುತ್ತದೆ, ಬೆಳೆ ಇಡುವುದು ಲೇಟಾದರೆ ಇಳುವರಿಯ ಮೇಲೆ ಬಹಳ ಕೆಟ್ಟ ಪರಿಣಾಮವಾಗಿ ಇಳುವರಿ ಕಡಿಮೆಯಾಗುತ್ತದೆ. ಈಗ ನೀರಾವರಿ ಸಲಹಾ ಸಮಿತಿಯು 10ನೇ ತಾರೀಖು ನೀರನ್ನು ಬಿಡಬೇಕೆಂದು ನಿರ್ಣಯವನ್ನು ಕೈಗೊಂಡರೂ, ಇಲಾಖಾ ಅಧಿಕಾರಿಗಳು ನೀರನ್ನು ಬಿಡಲಿಲ್ಲ. ರೈತರುಗಳು ನನ್ನ ಹತ್ತಿರ ಬಂದು ಮನವಿಯನ್ನು ಮಾಡಿದಮೇಲೆ, ನಾನು ಸಂಬಂಧಪಟ್ಟ (ಇಂಜಿನಿಯರ್) ಅವರನ್ನು ಸಂಪರ್ಕಿಸಿದೆ. ಅವರು ಹೇಳಿದರು ಜಲಾಶಯದಲ್ಲೇ ನೀರಿಲ್ಲ ನೀರನ್ನು ಎಲ್ಲಿ ಬಿಡುವುದು ಎಂದು. ಮಂತ್ರಿಗಳು ಇಲ್ಲ ನೀರು ಸಾಕಷ್ಟು ಇದೆ, ನಮ್ಮ ರೈತರ ಬೆಳೆಗಳಿಗೆ ತೊಂದರೆ ಆಗುವುದಿಲ್ಲ ಎಂದು ಹೇಳಿದರು. ಪಾಪ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆ ಎಂದು ಹೇಳಿ ಈ ಸರ್ಕಾರ ಅಧಿಕಾರಕ್ಕೆ ಬಂತು.. ನೀರಾವರಿಯ ಬಗ್ಗೆ ನಿಮ್ಮ ಆಶ್ವಾಸನೆಗಳು ಏನು ಇದ್ದಾವೆ ಅದು ನೀರಿನ ಮೇಲಿನ ಗುಳ್ಳೆಗಳಾದಾವು ಎಂದು ಹೇಳಿದರೆ ಅದು ಅತಿಶಯೋಕ್ತಿ ಆಗಲಿಕ್ಕಲ್ಲ. ಈಗ ಹೇಮಾವತಿ ಬಲ ಮೇಲ್ದಂಡೆಗೂ ಕೂಡ ಇವೊತ್ತಿಗೂ ಕೂಡ ನೀರನ್ನು ಬಿಟ್ಟಿಲ್ಲ. ನಿನ್ನೆ ತಾನೆ ನಾವು ಪ್ರಸ್ತಾಪ ಮಾಡುತ್ತೇವೆ ಎಂದು ಹೇಳಿ ಗೊತ್ತಾದಮೇಲೆ, ಇಲ್ಲಿಂದ ಸಚಿವರು ಸಂಪರ್ಕಿಸಿದ ಮೇಲೆ ನಿನ್ನೆಯಿಂದ ನೀರನ್ನು ಬಿಟ್ಟಿದ್ದಾರೆ ಎಂದು ನನಗೆ ಗೊತ್ತಾಗಿದೆ. ಈಗ ಹೇಮಾವತಿ ಬಲ ಮೇಲ್ದಂಡೆ ನಾಲೆಯಿಂದ ನೀರನ್ನು ಬಿಟ್ಟಿಲ್ಲ. ಯಾವಾಗ